Sl. No.	Name of the District	Balance No.of units	Amount (Rs.in lacs)	Percentage Amt.Pendency
**13	Gulbarga	181	607.17	2.55
*14	Belgaum	751	1279.52	5.37
15	Chitradurga	230	452.95	1.9
**16	Kolar	693	2017.82	8.46
*17	Bijapur	263	519.14	2.18
**18	Bangalore (Rural)	967	2394.12	10.05
19	Bidar	303	357.35	1.5
20	Karwar	535	940.10	4
**21	Davanagere	105	331.86	1.4
22	Chamarajnagar	150	292.10	1.23
**23	Haveri	79.0	111.82	0.5
24	Gadag	144	151.39	0.64
**25	Koppal	83	399.25	1.68
26	Udupi	301	849.41	3.56
27	Bagalkot	117	221.34	0.93
	Total	**9004**	**23841.16**	

* As on 31.5.2000

** As on 31.3.2000

ವಿವಿಧ ಇಲಾಖೆಗಳಲ್ಲಿ ಮೀಸಲಾತಿ ಹಣ ನಿಗಧಿಪಡಿಸುವಿಕೆ

4733 - ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಶೇಕಡ 18 ಮೀಸಲಾತಿ ನಿಗದಿಪಡಿಸಲಾದ ಮೊತ್ತವೆಷ್ಟು? ಹಾಗೂ ಇದರಲ್ಲಿ ಖರ್ಚಾಗದೆ ಉಳಿದಿರುವ ಹಣ ಎಷ್ಟು? ಉಳಿದಿದ್ದಲ್ಲಿ ಇದಕ್ಕೆ ಕಾರಣವನ್ನು ತಾಲ್ಲೂಕುವಾರು ನೀಡುವುದು?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ವಿವಿಧ ಇಲಾಖೆಗಳಲ್ಲಿ ಕಳೆದ 3 ವರ್ಷಗಳಲ್ಲಿ ನಿಗದಿಪಡಿಸಿದ ಹಣ ಮತ್ತು ಖರ್ಚಾದ ಹಣ ಹಾಗೂ ಉಳಿದ ಹಣ ಈ ಕೆಳಕಂಡಂತೆ ಇದೆ:

(ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ವರ್ಷ	ನಿಗದಿಪಡಿಸಿದ ಹಣ	ಖರ್ಚಾದ ಹಣ	ಉಳಿದಿರುವ ಹಣ
1)	1997-98	385.10	324.29	60.81
2)	1998-99	400.50	353.39	47.11
3)	1999-2000	442.76	350.70	92.06

ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಗಿರಿಜನ ಉಪಯೋಜನೆಗೆ ನಿಗದಿಪಡಿಸಿರುವ ಮೊತ್ತ, ಖರ್ಚಾದ ಮೊತ್ತ ಮತ್ತು ಖರ್ಚಾಗದೇ ಉಳಿದಿರುವ ಹಣದ ವಿವರ ಕೆಳಕಂಡಂತಿದೆ :

ಕ್ರಮ ಸಂಖ್ಯೆ	ವರ್ಷ	ನಿಗದಿಪಡಿಸಿದ ಹಣ	ಖರ್ಚಾದ ಹಣ	ಉಳಿದಿರುವ ಹಣ
1)	1997-98	66.38	54.19	12.19
2)	1998-99	76.18	69.56	6.62
3)	1999-2000	87.92	69.05	18.87

ರಾಜ್ಯ ಯೋಜನೆಯಲ್ಲಿ ಈ ಯೋಜನೆಗಳಿಗೆ ವಿವಿಧ ಅಭಿವೃದ್ಧಿ ಇಲಾಖೆಗಳ ಮುಖಾಂತರ ಅನುದಾನ ಒದಗಿಸಲಾಗುತ್ತಿದ್ದು, ಕೆಲವೊಂದು ಇಲಾಖೆ/ನಿಗಮ/ಮಂಡಳಿಗಳಿಗೆ ಒದಗಿಸುವ ಅನುದಾನವು ಸಾಂಕೇತಿಕವಾಗಿರುವುದರಿಂದ (ನೋಷನಲ್) ಸದರಿ ವಲಯಗಳಲ್ಲಿ ಪರಿಶಿಷ್ಟ ವರ್ಗದವರಿಗೆ ನಿರ್ದಿಷ್ಟವಾಗಿ ವಿನಿ-ಯೋಗಿಸಿದ ಹಣದ ಬಗ್ಗೆ ಮಾಹಿತಿ ದೊರೆಯುತ್ತಿಲ್ಲ. ಅಲ್ಲದೆ ಒಟ್ಟು ರಾಜ್ಯದ ಯೋಜನಾ ಗಾತ್ರದಲ್ಲಿ ಕಡಿತ ಉಂಟಾದಾಗ ಒದಗಿಸುವ ಅನುದಾನದಲ್ಲಿ ಕೂಡ ಕಡಿತವಾಗುವುದರಿಂದ ನಿಗಧಿತ ಗುರಿ ಸಾಧಿಸಲು ತೊಡಕಾಗಿರುತ್ತದೆ.

ಧಾರವಾಡ ಹುಬ್ಬಳ್ಳಿ ನಗರಗಳು ಬಹಳ ವೇಗದಿಂದ ಬೆಳೆಯುತ್ತಿರುವುದು.

4736 - ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಹುಬ್ಬಳ್ಳಿ ಮಹಾನಗರ ಬಹಳ ವೇಗದಿಂದ ಅವ್ಯವಸ್ಥೆಯಿಂದ ಬೆಳೆಯುತ್ತಿರುವುದು